ವಯಸ್ಸಿನ ಹುಡುಗನೊಬ್ಬನೊಡನೆ ಭಾತೃ ಪ್ರೇಮದಲ್ಲಿ ಪರದೆ ಇಲ್ಲದೆ ಭೇಟಿಯಾಗುವುದು, ಮಾತನಾಡುವುದೂ ಜುಹ್ರಾಳ ಸಂಕುಚಿತ ಮನಸ್ಸಿಗೆ ಸಹಿಸಲಾಗದು. ಮತ್ತೆ ಕಬೀರನ ಕಿವಿ ಊದುತ್ತಾಳೆ. ಕುಣಿಯಲಾರದವಳು ನೆಲ ಡೊಂಕು ಎಂದಂತೆ, ಸಂಸಾರ ಮಾಡಲಾರದ ಕಬೀರನಿಗೆ ಯಾವ ಹೆಂಡತಿಯೂ ಸರಿ ಹೋಗುವುದಿಲ್ಲ.

ಮತ್ತೆ ಸಕಾರಣವಿಲ್ಲದೆಯೇ, ತಾಯಿಗಾಗಲಿ, ಇತರ ಪತ್ನಿಯರಿಗಾಗಲಿ ತಿಳಿಸದೆಯೇ ಕಬೀರ್ ನಾಲ್ಕನೆ ಬಾರಿ ವಿವಾಹವಾಗುತ್ತಾನೆ. ತನ್ನಪ್ಪ ಮಾಡಿಟ್ಟ ಆಸ್ತಿಯ ಒಂದು ಮನೆಯಲ್ಲಿ ಬಾಡಿಗೆ ಕಟ್ಟಲಾರದೆ ಇದ್ದ ಬಡ ತಂದೆಯ ಎಳೆಯ ವಯಸ್ಸಿನ ಮಗಳು ನೂರ್‌ಜಹಾನ್‌ಳನ್ನು ಮದುವೆಯಾಗಿ, ಇತರರ ಅಸಹಾಯಕತೆಯನ್ನೂ ತನ್ನ ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳುತ್ತಾನೆ.

ಇಡೀ ಕಾದಂಬರಿ, ಮನೆಯ ಒಳಾಂಗಣದಲ್ಲಿಯೇ ಸಿಕ್ಕಿಬಿದ್ದ ಹೆಂಗಳೆಯರ ನಡುವಿನ ಅಧಿಕಾರದ ಆಟವನ್ನು, ಅವಿಶ್ವಾಸದ ಸಂಬಂಧಗಳನ್ನು ನಿಷ್ಕರುಣವಾಗಿ ತೆರೆದಿಡುತ್ತದೆ. ಕಬೀರ್ ಮತ್ತು ಜುಹ್ರಾಳ ಸಾವಿನೊಡನೆ ಕಾದಂಬರಿ ಕೊನೆಯಾದಾಗ, ಮನೆಯ ಒಡತಿಯ ಪ್ರತಿಷ್ಠಿತ ಸ್ಥಾನವನ್ನು ಹಿರಿಯ ಪತ್ನಿಯ ಅಧಿಕಾರದ ಪಟ್ಟ ತೊಟ್ಟ ನಾಝ್ನಿ ಅಲಂಕರಿಸುತ್ತಾಳೆ. ವಿಷವರ್ತುಲದ ಚಕ್ರ ಮತ್ತೆ ತಿರುಗುತ್ತದೆ. ಪಿತೃಪ್ರಧಾನತೆಗೆ ಬಲಿಪಶುಗಳಾಗಿದ್ದ ಹೆಣ್ಣುಗಳು, ತಮ್ಮ ಅಜ್ಞಾನದಲ್ಲಿ, ಅಹಂಕಾರದಲ್ಲಿ, ತಾವು ಕೂಡಾ ಅದೇ ಪುರುಷ ಪ್ರಧಾನತೆಯ ಹರಿಕಾರರಾಗಿ ಮುಂದುವರೆಸುವ, ಪುರುಷ ಕೇಂದ್ರಿತ ವ್ಯವಸ್ಥೆಯ ಭಾಗವಾಗುವ ವಿಷಾದವನ್ನು ಮೊನಚಾಗಿ ಇಕ್ಬಾಲುನ್ನೀಸಾ ತೋರಿಸುತ್ತಾರೆ.

ಸಮಾಜದ ಲಿಂಗ ರಾಜಕಾರಣವನ್ನು, ಪಿತೃಪ್ರಧಾನತೆ ಕುಟುಂಬದ ಒಳಗೇ ಹೆಣ್ಣನ್ನು ಹೆಣ್ಣಿನ ವಿರುದ್ಧವೇ ಎತ್ತಿ ಕಟ್ಟುವ ಕುತಂತ್ರವನ್ನು, ದುರಂತವನ್ನು ಅತ್ಯಂತ ತೀಕ್ಷ್ಣವಾಗಿ ವ್ಯಂಗ್ಯ ಮಿಶ್ರಿತ, ಆಕ್ರೋಶ ಬೆರೆತ ಹರಿತವಾದ ಕಟು ಪದಗಳಲ್ಲಿ ತೆರೆದಿಟ್ಟಿದ್ದಾರೆ. ಅವರ ಕಾದಂಬರಿಯ ತೀಕ್ಷ್ಣತೆ, ಸ್ತ್ರೀವಾದದ ಪ್ರಖರತೆ ಪ್ರತಿ ಪುಟದಲ್ಲೂ ಪ್ರಜ್ವಲಿಸುತ್ತದೆ.

## ಕಾಲಾತೀತ ಕಾದಂಬರಿ

ಇಕ್ಬಾಲುನ್ನೀಸಾ, ಧರ್ಮ ಮತ್ತು ಸಂಪ್ರದಾಯದ ಅಗಾಧ ಹೊರೆ ಹೆಂಗಳೆಯರ ಬದುಕನ್ನು ಹೊಸಕಿ ಹಾಕುವ ರೀತಿಯನ್ನು ತೋರಿಸುತ್ತಾರೆ; ಪ್ರತಿಭಟಿಸುವ ಅಗತ್ಯವಿದೆ ಎಂದೂ ಸೂಚಿಸುತ್ತಾರೆ. ಪುರುಷ ಕೇಂದ್ರಿತ ಸಮಾಜದಲ್ಲಿ, ಪಿತೃಪ್ರಧಾನತೆ ಉಳಿಯಲು ಮಹಿಳೆ ಅದೃಶ್ಯವಾಗಿರುವ ಅಗತ್ಯವಿದೆ. ಹೊಸಿಲಿನಾಚೆ ಮಹಿಳೆ ಹೆಜ್ಜೆ ಇಟ್ಟು, ಹೆಣ್ಣುಹೆಣ್ಣು ಒಂದಾಗುವ, ಬೆರೆಯುವ, ಸ್ವತಂತ್ರವಾಗಿ ಯೋಚಿಸುವ ಸಾಧ್ಯತೆಯೇ ಪುರುಷ ನಿರ್ಮಿತ, ಪುರುಷ ಕೇಂದ್ರಿತ ವ್ಯವಸ್ಥೆಗೆ ಅಪಾಯದ್ದು. ಹಾಗೆಂದೇ, ಅವಳನ್ನು ಧರ್ಮದ ಹೆಸರಿನಲ್ಲಿಯೋ, ಸಂಸ್ಕೃತಿಯ ಹೆಸರಿನಲ್ಲಿಯೋ, ಆಕೆಯ ಸಂರಕ್ಷಣೆಯ ನೆಪದಲ್ಲಿಯೋ ಮನೆಯೊಳಗೇ ಹಿಡಿದಿಡುವುದು ಮುಖ್ಯವಿತ್ತು. ಈ ಲಿಂಗರಾಜಕಾರಣವನ್ನು ಅರಿಯದ ಜುಹ್ರಾಳಂತಹ ದಡ್ಡ ಮಹಿಳೆಯರು, ತಮ್ಮ ಮೇಲೆ ಪುರುಷರು ಹೇರಿದ್ದ ಆಯ್ಕೆ ಇಲ್ಲದ ಬದುಕಿನಲ್ಲಿ ನರಳಿದ್ದರೂ, ಒಂದು ಸಿನಿಮಾಗೆ ಇರಲಿ, ದರ್ಗಾಕ್ಕೂ ತನ್ನನ್ನು ಕಳುಹಿಸದ ಪತಿ ಹೊರೆಸಿದ 'ವಿಧೇಯತೆ ಮತ್ತು ಸದ್ಗುಣಗಳಲ್ಲಿ ನಿನಗೆ ಸಮಾನರಿಲ್ಲ' ಎಂಬ ಮುಳ್ಳಿನ ಕಿರೀಟವನ್ನು, ಅವನು ಸತ್ತ ಮೇಲೂ ಹೊತ್ತು ಕುಳಿತುಕೊಳ್ಳುತ್ತಾರೆ. ಅದೇ ಮುಳ್ಳಿನ ಕಿರೀಟವನ್ನು ಮುಂದಿನ ಪೀಳಿಗೆಯ ಹೆಣ್ಣುಮಕ್ಕಳ ತಲೆಗೆ ಹೊರಿಸಲು ತವಕಿಸುತ್ತಾರೆ. ತಮ್ಮನ್ನು ಬಲಿಪಶುವಾಗಿಸಿದ ಅದೇ ಪಿತೃಪ್ರಧಾನತೆಯನ್ನು ಅಂತರ್ಗತವಾಗಿಸಿಕೊಂಡು, ಅದರ ಮುಂದುವರಿಕೆಗೆ ತಾವೂ ಕೂಡಾ ಕಾರಣರಾಗುವುದನ್ನು ಇಕ್ಬಾಲುನ್ನೀಸಾ ಜುಹ್ರಾಳ ಪಾತ್ರದ ನಿರೂಪಣೆಯಲ್ಲಿ ಕೆತ್ತಿ ನಿಲ್ಲಿಸಿದ್ದಾರೆ.